Unsecured Loans

| | | |
|---|---|---|
| K.S.I.I.D.C. | ... | Rs. 25.00 lakhs |
| Working capital | | |
| Loan from Banks | ... | 95.13 ,, |
| Paid up capital | ... | 152.70 ,, |

ಶ್ರೀ ಎಂ. ಎಸ್. ಆತ್ಮಾನಂದ್.—ಈ ಕಾರ್ಖಾನೆಯು ೧೯೭೬ನೇ ಇಸವಿಯಲ್ಲಿ ಪ್ರಾರಂಭವಾ ವರ್ಷಕ್ಕೆ ೨೪,೦೦೦ ಸ್ಕೂಟರುಗಳನ್ನು ಉತ್ಪಾದಿಸಿದೆ ಎಂದು ಹೇಳಿದ್ದೀರಿ. ಈವರೆಗೆ ಎಷ್ಟು ಸ್ಕೂಟರು ಗಳನ್ನು ಉತ್ಪಾದಿಸಿದೆ ಎಂದು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಆರ್. ಗುಂಡೂರಾವ್.—ಈವರೆಗೆ ನಾಲ್ಕು ಸಾವಿರ ಸ್ಕೂಟರುಗಳನ್ನು ಉತ್ಪಾದನೆ ಮಾಡಿದ್ದಾರೆ.

ಶ್ರೀ ಎಂ. ಎಸ್. ಆತ್ಮಾನಂದ್.—ಈಗ ಪೆಟ್ರೋಲ್ ಬೆಲೆ ಜಾಸ್ತಿಯಾಗಿರುವುದರಿಂದ ದ್ವಿಚಕ್ರ ವಾಹನಗಳ ಬಹಳಷ್ಟು ಬೇಡಿಕೆ ಸಂಬಂಧವಾಗಿ, ಕಾರ್ಖಾನೆ ವಿಭಾಗಾಯಕವಾಗಿ ಸಡೆಯುವುದಕ್ಕೆ ಏನಾದರೂ ಕಾರ್ಯಕ್ರಮ ಸರ್ಕಾರ ಕೈಗೊಂಡಿದೆಯೇ ? ಆ ರೀತಿ ಮಾಡಿದ್ದರೆ ಅದನ್ನು ತಿಳಿಸಬೇಕಂ.

ಶ್ರೀ ಆರ್. ಗುಂಡೂರಾವ್.— ಉತ್ತಮಪಡಿಸಬೇಕೆನ್ನುವ ಉದ್ದೇಶದಿಂದಲೇ ಫಾಲ್ಕನ್ ಸ್ಕೂಟರ್‌ರವರಿಗೆ ಕೊಟ್ಟಿದ್ದೇವೆ. ಪೆಟ್ರೋಲ್ ಬೆಲೆ ಜಾಸ್ತಿ ಇರುವುದರಿಂದ ನವೀನ ರೀತಿಯಲ್ಲಿ ಸ್ಕೂಟರ್‌ಗಳನ್ನು ತಯಾರುಮಾಡಿ ಸಾಮಾನ್ಯ ಜನರಿಗೂ ಸಿಗುವಂತೆ ಮಾಡಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಈ ವರೆಗೆ ೨೪ ಸಾವಿರ ಸ್ಕೂಟರುಗಳನ್ನು ತಯಾರುಮಾಡಬೇಕಾಗಿತ್ತು. ಆದರೆ ೪ ಸಾವಿರ ತಯಾರಾಗಿವೆ. ಈಗ ೧೧ ಸಾವಿರ ಸ್ಕೂಟರುಗಳನ್ನು ತಯಾರುಮಾಡುತ್ತೇವೆ.

ಶ್ರೀ ಪಂಪಾಪತಿ.—ನನ್ನ ಪ್ರಶ್ನೆ ಈ ಕಾರ್ಖಾನೆ ಪ್ರಾರಂಭದಿಂದಲೂ ಲಾಭ ಗಳಿಸಿಲ್ಲವೆಂದು ಹೇಳಿದ್ದೀರಿ. ಹಾಗಾದರೆ ಲುಕ್ಸಾನು ಎಷ್ಟಾಗಿದೆ ?

ಶ್ರೀ ಆರ್. ಗುಂಡೂರಾವ್.—ಲುಕ್ಸಾನು ಆಗಿಲ್ಲ, ಲಾಭಗಳಿಸಿಲ್ಲ.

(ಪ್ರಶ್ನೆ ನಂ. ೧೧೬ (೪೭೭) ಸದಸ್ಯರು ಗೈರುಹಾಜರು)
(ಪ್ರಶ್ನೆ ನಂ. ೧೧೭ (೪೮೨) ಸದಸ್ಯರು ಗೈರುಹಾಜರು)

**Extension of Sira High School Building.**

745 SRI S. LINGAIAH (Sira).—Will the Minister of State for Primary and Secondary Education be pleased to state.—

(a) whether the Government intend to make any extensions to the buildings of Government High School at Sira ;

(b) the No. of rooms in that school and the No. of stduents ;

(c) the total No. of rooms required on the basis of students strength including the room for housing the laboratory.

(d) action taken by the Government for construction of additional rooms required by the school as speedily as possible ?

SMT. NAGAMMA, C KESHAVAMURTHY( Minister of State for Primary and Secondary Education.)—

(a) Yes.

(b) Total ; 13 rooms.

| No. of Students | | |
|---|---|---|
| 8th Standard | 289 | 4 Sections. |
| 9th Standard | 290 | 4 Sections. |
| 10th Standard | 272 | 3 Sections, |
| Total | 851 | 11 Sections. |

(c) Total 16 rooms are required.

(d) It is proposed to construct additional rooms for this school. But due to the financial difficulties, the construction of addditional rooms have been stopped for the time being.

ಶ್ರೀ ಎಸ್. ಲಿಂಗಯ್ಯ.—ಮಂತ್ರಿಗಳು ಅಂಕಿಸಂಖ್ಯೆ ಕೊಟ್ಟಿರುವುದು ಬಹಳ ಹಿಂದಿನದು. ಈಗಿನ ಪ್ರಕಾರ ಒಟ್ಟು ೧,೧೭೭ ಸಂಖ್ಯೆ ಇದೆ. ಅವರು ಕೊನೆಯ ಉತ್ತರದಲ್ಲಿ ಹೇಳುವಾಗ ಹಣಕಾಸಿನ ಮುಗ್ಗಟ್ಟಿನಿಂದ ತಡೆಹಿಡಿಯಲಾಗಿದೆ ಎಂದು ಹೇಳಿದ್ದಾರೆ. ೨೫ ಶಾಲಾ ಕೊಠಡಿಗಳ ಅವಶ್ಯಕತೆ ಇರುವುದರಿಂದ ಪುನರ್‌ಪರಿಶೀಲನೆಮಾಡಿ ತತ್‌ಕ್ಷಣ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ?

† ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.— ಶಾಲೆಗಳು ೧೩ ಕೊಠಡಿಗಳಲ್ಲಿ ನಡೆಯುತ್ತಿವೆ. ಅದರಲ್ಲಿ ೧೦ ಸ್ವಂತ ಕಟ್ಟಡಗಳು, ಮೂರು ಬಾಡಿಗೆಗೆ ತೆಗೆದುಕೊಂಡಿದ್ದೇವೆ. ಈಗಕೊಟ್ಟಿರುವ ಕೊಠಡಿಗಳಿಗಿಂತ ಜಾಸ್ತಿಬೇಕೆಂದರೆ ಅದನ್ನು ಪುನರ್ ಪರಿಶೀಲನೆ ಮಾಡಬಹುದು. ೧೯೮೦-೮೧ರಲ್ಲಿ ಕಟ್ಟಡಗಳನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ೧೯೮೧-೮೨ರಲ್ಲಿ ಖಂಡಿತ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್ ಲಿಂಗಯ್ಯ.—೧೧ನೇ ತರಗತಿಯ ಮಕ್ಕಳು ಜಾಸ್ತಿ ಇದ್ದಾರೆ. ಆದರೆ ಅಂಕಿಸಂಖ್ಯೆ ಇದೆ ಒಂದೊಂದು ಸೆಕ್ಷನ್‌ನಲ್ಲಿ ೧೦೯, ೧೧೮ ಈ ರೀತಿ ಇದ್ದಾರೆ ದನಗಳ ತರಹ ಮಕ್ಕಳು ಪಾಠ ಕೇಳಬೇಕಾಗಿದೆ ಅದಕ್ಕಾಗಿ ಶೀಘ್ರವಾಗಿ ಮಾಡುತ್ತೇವೆ ಎನ್ನುವ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—೧೯೮೧-೮೨ರಲ್ಲಿ ಈ ಶಾಲೆಗೆ ಕಟ್ಟಡದ ಬಗ್ಗೆ ಆದ್ಯತೆಯನ್ನು ಕೊಡಲಾಗುತ್ತದೆ.

ಅಧ್ಯಕ್ಷರು.—ಶ್ರೀ ಎಸ್. ಆರ್. ಬೊಮ್ಮಾಯಿ, ಬಾವೂರಾವ್ ದೇಶಪಾಂಡೆ ಸದಸ್ಯರು ಗೈರುಹಾಜರು.

ಪ್ರಶ್ನೋತರ ವೇಳೆ ಮುಗಿಯಿತು.